ಹಾಕಿದೆ ಎಂದು ಹೇಳಿ ಕಳಿಸಿದ್ದಾರೆ. ಇಷ್ಟರಲ್ಲಿಯೇ ಶಿಕ್ಷಣ ಮಸೂದೆ ಸಭೆಯ ಮುಂದೆ ಬರುವುದಿದೆ. ಆ ಸಂದರ್ಭದಲ್ಲಿ ಇದಕ್ಕೂ ಏನಾದರೂ ಒಂದು ದಾರಿ ಹುಡುಕೋಣ ಎಂದು ನಾನು ಯೋಚನೆ ಮಾಡುತ್ತಿದ್ದೇನೆ.

ಪ್ರಶ್ನೆ: ೩೧೯ | (ಮಾನ್ಯ ಸದಸ್ಯರುಗಳು ಹಾಜರಿರಲಿಲ್ಲ)

ಪ್ರಶ್ನೆ: ೩೮೭ |

ಗ್ರಾಮಾಭಿವೃದ್ಧಿ ಹಾಗೂ ಸಹಕಾರ ಇಲಾಖೆಯಲ್ಲಿನ ಸಿಬ್ಬಂದಿ ಮಾದರಿ

೧೦೯ (೩೧೯) ಶ್ರೀ ಎಂ. ಎಸ್. ಕೃಷ್ಣನ್ (ರಾಜಾಜಿನಗರ).— ಮಾನ್ಯ ಗ್ರಾಮಾಭಿವೃದ್ಧಿ ಹಾಗೂ ಪಂಚಾಯತ್ ರಾಜ್ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ:—

ಅ) ಗ್ರಾಮೀಣ ಅಭಿವೃದ್ಧಿ ಮತ್ತು ಸಹಕಾರ ಇಲಾಖೆಯಲ್ಲಿ ಎರವಲು ಸೇವೆಯ ಮೇಲೆ ಅಧಿಕ ಸಂಖ್ಯೆಯಲ್ಲಿ ಕೆಲಸ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ?

ಆ) ಸದರಿ ಗ್ರಾಮೀಣ ಅಭಿವೃದ್ಧಿ ಮತ್ತು ಸಹಕಾರ ಇಲಾಖೆಯಲ್ಲಿ ಅಂತಹ ಎರವಲು ಸೇವೆಗಳು ಕರ್ನಾಟಕ ಸಚಿವಾಲಯದ ಗ್ರೂಪ್ ಬಿ ಸೇವಾ (ನೇಮಕಾತಿ) ನಿಯಮಾವಳಿಗಳಿಗೆ ವಿರುದ್ಧವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ?

ಇ) ಸದರಿ ಇಲಾಖೆಯಲ್ಲಿ ಕೆಲಸ ಮಾಡುತ್ತಿರುವ ನೌಕರರು ಎರವಲು ಸೇವೆಯ ಮೇಲೆ ೧೦-೨೦ ವರ್ಷಗಳಿಂದ ಕೆಲಸ ಮಾಡುತ್ತಿರುವುದು ಎರವಲು ಸೇವೆಯ ನಿಯಮಾವಳಿಗೆ ವಿರುದ್ಧವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ? (ಪಟ್ಟಿಯನ್ನು ಲಗತ್ತಿಸತಕ್ಕದ್ದು);

ಈ) ಸದರಿ ಎರವಲು ಸೇವೆ ನೌಕರರನ್ನು ಗ್ರಾಮೀಣ ಅಭಿವೃದ್ಧಿ ಮತ್ತು ಸಹಕಾರ ಇಲಾಖೆಯಿಂದ ವರ್ಗ ಮಾಡಿ ಅವರವರ ಮಾತೃ ಇಲಾಖೆಗೆ ಕಳುಹಿಸುವ ಬಗ್ಗೆ ಹಾಗೂ ಸಚಿವಾಲಯದ ನೌಕರರನ್ನು ನೇಮಕ ಮಾಡಲು ಸರ್ಕಾರ ಏನು ಕ್ರಮ ತೆಗೆದುಕೊಂಡಿದೆ?

ಶ್ರೀ ಅಬ್ದುಲ್ ನಜೀರ್‌ಸಾಬ್ (ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು).—

ಅ) ಹೌದು.

ಆ) ಕರ್ನಾಟಕ ಸಚಿವಾಲಯದ ಗ್ರೂಪ್ ಬಿ ಸೇವಾ (ನೇಮಕಾತಿ) ನಿಯಮಾವಳಿಯು ಅಭಿವೃದ್ಧಿ ಕಮಿಷನರ್‌ರವರ ಸಿಬ್ಬಂದಿ ಶಾಖೆ ಮತ್ತು ಗ್ರಾಮಾಭಿವೃದ್ಧಿ ಇಲಾಖೆಯಲ್ಲಿರುವ ಇತರೆ ವಿಶೇಷ ಘಟಕಗಳಲ್ಲಿ ಕೆಲಸ ಮಾಡುತ್ತಿರುವ ನೌಕರರಿಗೆ ಅನ್ವಯಿಸುವುದಿಲ್ಲ.

ಇ) ಹೌದು, ಗ್ರಾಮಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯಲ್ಲಿ ೫ ವರ್ಷಗಳಿಗೂ ಮೇಲ್ಪಟ್ಟು (ಅವರ ಹಿಂದಿನ ಎರವಲು ಸೇವೆಯನ್ನು ಸಹ ಸೇರಿಸಿ) ಎರವಲು ಸೇವಾ ಆಧಾರದ ಮೇಲೆ ಕೆಲಸ ಮಾಡುತ್ತಿರುವ ನೌಕರರ ಪಟ್ಟಿಯನ್ನು ಲಗತ್ತಿಸಿದೆ.

ಈ) ಐದು ವರ್ಷಕ್ಕೂ ಮೇಲ್ಪಟ್ಟು (ಅವರ ಹಿಂದಿನ ಎರವಲು ಸೇವೆಯನ್ನು ಸಹ ಸೇರಿಸಿ) ಎರವಲು ಸೇವೆಯ ಮೇಲೆ ಕೆಲಸ ಮಾಡುತ್ತಿರುವವರನ್ನು ಹಂತ ಹಂತವಾಗಿ ಅವರವರ ಇಲಾಖೆಗೆ ವಾಪಸ್ಸು ಕಳುಹಿಸಲಾಗುವುದು. ಇಲಾಖಾ ಕೆಲಸವು ಸುಗಮವಾಗಿ ನಡೆಯುವ ಕಾರಣದಿಂದ ಹಿಂಗೆ ಹಂತ ಹಂತವಾಗಿ ನೌಕರರನ್ನು ಅವರವರ ಇಲಾಖೆಗಳಿಗೆ ವಾಪಸ್ಸು ಕಳುಹಿಸುವುದು ಅವಶ್ಯವಿರುತ್ತದೆ. ಅಭಿವೃದ್ಧಿ ಕಮಿಷನರ್‌ರವರ ಸಿಬ್ಬಂದಿ ಶಾಖೆಯಲ್ಲಿ ಹಾಗೂ ಇಲಾಖೆಯ ವಿವಿಧ ವಿಶೇಷ ಘಟಕಗಳಲ್ಲಿ ಕೆಲಸ ಮಾಡುತ್ತಿರುವ ನೌಕರರು ಗ್ರಾಮೀಣಾಭಿವೃದ್ಧಿ ಇಲಾಖೆಯ ನೇತೃತ್ವದಲ್ಲಿ ಕಾರ್ಯಗತಗೊಳ್ಳುತ್ತಿರುವ ವಿವಿಧ ಕಾರ್ಯಕ್ರಮಗಳ ಕಲಸಗಳನ್ನು ನೋಡಿಕೊಳ್ಳುತ್ತಿರುತ್ತಾರೆ. ಕಂದಾಯ, ವ್ಯವಸಾಯ, ಆರ್ಥಿಕ ಮತ್ತು ಅಂಕಿ ಅಂಶಗಳ ಇಲಾಖೆ, ಲೆಕ್ಕಪತ್ರ ಇಲಾಖೆ ಹಾಗೂ ಮುಖ್ಯಮಂತ್ರಿಗಳ ಪಾಲಿಗೆ ವಿವಿಧ ಇಲಾಖೆಗಳಿಂದ ಗ್ರಾಮೀಣಾಭಿವೃದ್ಧಿ ಇಲಾಖೆಯು ತನಗೆ ಬೇಕಾದ ಸಿಬ್ಬಂದಿಯನ್ನು ಎರವಲು ಪಡೆಯಬೇಕಾಗಿರುತ್ತದೆ. ಹಿಂಗೆ ಬೇರೆ ಬೇರೆ ಇಲಾಖೆಗಳಿಂದ ಬಂದ ಸಿಬ್ಬಂದಿಯಲ್ಲದೆ ಸಚಿವಾಲಯದ ನೌಕರರು ಸಹ ಈ ಇಲಾಖೆಯಲ್ಲಿ ಕೆಲಸ ಮಾಡುತ್ತಿದ್ದಾರೆ.

ಚುಕ್ಕೆ ಗುರುತಿನ ಪ್ರಶ್ನೆ ೩೧೯ಕ್ಕೆ ಅನುಬಂಧ.

ಗ್ರಾಮೀಣ ಅಭಿವೃದ್ಧಿ ಮತ್ತು ಸಹಕಾರ ಇಲಾಖೆಯಲ್ಲಿ ಎರವಲು ಸೇವೆಯ ಮೇಲೆ ಐದು ವರ್ಷಕ್ಕೂ ಹೆಚ್ಚಾಗಿ ಕೆಲಸ ಮಾಡುತ್ತಿರುವ ನೌಕರರ ಪಟ್ಟಿ.

ಕ್ರ. ಸಂ.	ನೌಕರನ ಹೆಸರು	ಹುದ್ದೆ	ಯಾವ ದಿನಾಂಕ ದಿಂದ ಕೆಲಸ ಮಾಡುತ್ತಿದ್ದಾರೆ	ಯಾವ ಇಲಾಖೆ ಯೂನಿಟ್‌ಗೆ ಸೇರಿದವರು
೧	೨	೩	೪	೫
೧.	ವೈ.ಕೆ. ಏಸುದಾಸ್	ತಾಲ್ಲೂಕು ಶಿರಸ್ತೇದಾರ್	೭–೭–೭೬	ಕಂದಾಯ ಇಲಾಖೆ ಮೈಸೂರು ವಿಭಾಗ
೨.	ಆರ್.ವಿ. ಜೋಷಿ	,,	೨೩–೧–೬೨ರಿಂದ ೩೦–೯–೭೫ ೧೮–೭–೮೩	ಕಂದಾಯ ಇಲಾಖೆ ಗುಲ್ಬರ್ಗಾ ವಿಭಾಗ
೩.	ಕೆ.ಎನ್. ದೇವಮ್ಮ	೧ನೇ ದರ್ಜೆ ಗುಮಾಸ್ತೆ	೧೦–೧೦–೭೫	ಕಂದಾಯ ಇಲಾಖೆ ಜಿಲ್ಲಾಧಿಕಾರಿ ಕೊಡಗು
೪.	ಕೆ.ಎ. ರೇವಣಸಿದ್ದಯ್ಯ	೨ನೇ ದರ್ಜೆ ಗುಮಾಸ್ತೆ ೧ನೇ ದರ್ಜೆ ಗುಮಾಸ್ತೆ	೨೫–೧–೬೨ರಿಂದ ೨೬–೧೦–೭೬ ೨೭–೧೦–೭೬	ಕಂದಾಯ ಇಲಾಖೆ ಜಿಲ್ಲಾಧಿಕಾರಿ ಹಾಸನ
೫.	ಡಿ.ಎಂ. ಗುಂಡಪ್ಪ	೨ನೇ ದರ್ಜೆ ಗುಮಾಸ್ತೆ ೧ನೇ ದರ್ಜೆ ಗುಮಾಸ್ತೆ	೧೨–೮–೬೬ರಿಂದ ೮–೧೨–೭೬ ೧೦–೯–೮೦	ಕಂದಾಯ ಇಲಾಖೆ ಜಿಲ್ಲಾಧಿಕಾರಿ ಬೆಂಗಳೂರು
೬.	ಎಂ.ಪಿ. ರಾಘವೇಂದ್ರರಾವ್	೨ನೇ ದರ್ಜೆ ಗುಮಾಸ್ತೆ ೧ನೇ ದರ್ಜೆ ಗುಮಾಸ್ತೆ	೪–೫–೭೩ರಿಂದ ೧೫–೫–೭೬ ೧–೪–೭೭	ಕಂದಾಯ ಇಲಾಖೆ ಜಿಲ್ಲಾಧಿಕಾರಿ ಬೆಂಗಳೂರು
೭.	ಸೈಯದ್ ಜಹೀರ್‌ಉಲ್ಲ	೧ನೇ ದರ್ಜೆ ಗುಮಾಸ್ತೆ	೧–೮–೭೭	ಕಂದಾಯ ಇಲಾಖೆ ಜಿಲ್ಲಾಧಿಕಾರಿ ತುಮಕೂರು
೮.	ಬಿ.ಸಿ. ಪದ್ಮಾವತಿ	೧ನೇ ದರ್ಜೆ ಗುಮಾಸ್ತೆ	೧–೩–೭೭	ರಾಜ್ಯ ಲೆಕ್ಕಪತ್ರ ಇಲಾಖೆ
೯.	ಎಂ. ರಾಜಶೇಖರರೆಡ್ಡಿ	೨ನೇ ದರ್ಜೆ ಗುಮಾಸ್ತೆ	೧–೧–೭೯	ಕೃಷಿ ಇಲಾಖೆ

೧	೨	೩	೪	೫
೧೦.	ಕೆ. ಆರ್. ವೆಂಕಟಪ್ಪ	೨ನೇ ದರ್ಜೆ ಗುಮಾಸ್ತೆ	೧೩-೪-೭೮	ಕಂದಾಯ ಇಲಾಖೆ ಜಿಲ್ಲಾಧಿಕಾರಿ, ಮಂಡ್ಯ
೧೧.	ಪಿ.ವಿ. ವೆಂಕಟೇಶಮೂರ್ತಿ	೨ನೇ ದರ್ಜೆ ಗುಮಾಸ್ತೆ	೧೬-೧೨-೭೨	ಕಂದಾಯ ಇಲಾಖೆ ಜಿಲ್ಲಾಧಿಕಾರಿ, ತುಮಕೂರು
೧೨.	ಜಿ. ಸತ್ಯನಾರಾಯಣ	೨ನೇ ದರ್ಜೆ ಗುಮಾಸ್ತೆ	೧-೨-೭೭	ಕಂದಾಯ ಇಲಾಖೆ ಜಿಲ್ಲಾಧಿಕಾರಿ, ಬೆಂಗಳೂರು
೧೩.	ಗೋಪಾಲಕೃಷ್ಣ	೧ನೇ ದರ್ಜೆ ಗುಮಾಸ್ತೆ	೪-೮-೭೫	ಕಂದಾಯ ಇಲಾಖೆ ಜಿಲ್ಲಾಧಿಕಾರಿ, ಬೆಂಗಳೂರು
೧೪.	ಶಾರದ ತೋಡುರ್	೧ನೇ ದರ್ಜೆ ಗುಮಾಸ್ತೆ	೩೧-೭-೭೬	ಕಂದಾಯ ಇಲಾಖೆ ಜಿಲ್ಲಾಧಿಕಾರಿ, ಉ. ಕನ್ನಡ
೧೫.	ಪಾಷ ಎಸ್. ಎಂ.	ಹಿರಿಯ ಅಂಕಿ ಅಂಶಗಳ ಸಹಾಯಕ	೧೫-೧೨-೭೬	ಅಂಕಿ ಅಂಶಗಳ ಇಲಾಖೆ
೧೬.	ಮಹಮದ್ ಯೂನಸ್	ಬೆರಳಚ್ಚುಗಾರ	೧೯-೪-೭೧	ಕಂದಾಯ ಇಲಾಖೆ ಜಿಲ್ಲಾಧಿಕಾರಿ, ಬೆಂಗಳೂರು
೧೭.	ಟಿ.ಆರ್. ಶೇಷಾದ್ರಿ	,,	೧೦-೪-೭೫	ಕಂದಾಯ ಇಲಾಖೆ ಜಿಲ್ಲಾಧಿಕಾರಿ, ತುಮಕೂರು
೧೮.	ಶ್ರೀಪಾದರಾವ್	,,	೫-೧೧-೭೧	ಕಂದಾಯ ಇಲಾಖೆ ಜಿಲ್ಲಾಧಿಕಾರಿ, ತುಮಕೂರು
೧೯.	ಬಿ. ಎನ್. ನರಸಿಂಹಯ್ಯ	,,	೨೧-೧-೭೨	ಕಂದಾಯ ಇಲಾಖೆ ಜಿಲ್ಲಾಧಿಕಾರಿ, ತುಮಕೂರು
೨೦.	ಎ.ಕೆ. ಮಾಯಣ್ಣ	,,	೧೦-೧೦-೭೫	ನಿರ್ದೇಶಕರು, ಕೃಷಿ ಇಲಾಖೆ
೨೧.	ಬಿ. ಸುಬ್ಬಾರೆಡ್ಡಿ	೨ನೇ ದರ್ಜೆ ಗುಮಾಸ್ತೆ	೨೮-೧೧-೭೭	ಕಂದಾಯ ಇಲಾಖೆ ಜಿಲ್ಲಾಧಿಕಾರಿ, ಮಂಡ್ಯ